ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

ಸಾಕ್ಷಿಯ ಹೆಸರು :- ಕಿರಣ್ ಬಿ ಜಿ

ತಂದೆ/ಗಂಡನ ಹೆಸರು :- ಗಿರಿಯಪ್ಪ

ವಯಸ್ಸು :- 40 ವರ್ಷ

ಉದ್ಯೋಗ :- ಅಬಕಾರಿ ಅಧೀಕ್ಷಕರು

ವಾಸಸ್ಥಳ :- ಚಿತ್ರದುರ್ಗ

(ಸಾಕ್ಷಿಗೆ ದಿನಾಂಕಃ 13-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು ಜುಲೈ 2022 ರಿಂದ ಸೆಪ್ಟೆಂಬರ್ 2024 ರವರೆಗೆ ಮಂಡ್ಯದ ಉಪ ಅಧೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ 03-05-2023 ರಂದು ಚಾಸಾ-2 ಮತ್ತು 3 ರವರೊಂದಿಗೆ ಮದ್ಯಾಹ್ನ 12.25 ರ ಸಮಯದಲ್ಲಿ ನಾನು ಸರ್ಕಾರಿ ವಾಹನ ಸಂಖ್ಯೆ ಕೆಎ -11 ಜಿ-706 ಸರ್ಕಾರಿ ಜೀಪಿನಲ್ಲಿ ಮದ್ದೂರು-ಮಳವಳ್ಳಿ ರಸ್ತೆಯಲ್ಲಿ ಗಸ್ತು ತಿರುಗುತ್ತಿದ್ದಾಗ, ಗುಡಿಗೆರೆ ಗ್ರಾಮದ ಎಳನೀರು ಮಾರುಕಟ್ಟೆಯ ಹತ್ತಿರ ಒಬ್ಬ ಆಸಾಮಿಯು ಕೆ ಎಂದೊಡ್ಡಿಯ ಕಡೆಯಿಂದ ಹೀರೋ ಹೊಂಡಾ ಪ್ಯಾಷನ್ ಪ್ರೋ ನ ನಂ.ಕೆಎ-11-ಇಇ-0519 ರ ವಾಹನದ ಮೇಲೆ ಬಿಳಿ ಚೀಲ ಇಟ್ಟುಕೊಂಡು ಕೆ ಎಂ ದೊಡ್ಡಿ ಕಡೆಯಿಂದ ಮದ್ದೂರು ಕಡೆಗೆ ಬರುತ್ತಿದ್ದು, ನಮ್ಮನ್ನು ಮತ್ತು ವಾಹನವನ್ನು ನೋಡಿ ವಾಹನವನ್ನು ತಿರುಗಿಸಿ ವಾಪಸ್ಸು ಹೋಗಲು ಪ್ರಯತ್ನಿಸಿದ್ದು, ಆದರೆ ಅಲ್ಲಿಯೇ ವಾಹನವನ್ನು ಮತ್ತು ಮೂಮಾ ನ್ನು ಬೀಳಿಸಿ ಓಡಿ ಹೋಗಿರುತ್ತಾರೆ. ಹಿಡಿಯಲು ಪ್ರಯತ್ನಿಸಿ ಸಿಕ್ಕಿರುವುದಿಲ್ಲ. ಸ್ಥಳಕ್ಕೆ ಬಂದು ವಾಹನ ಮತ್ತು ಚೀಲವನ್ನು ನೋಡಲಾಗಿ ಮಧ್ಯವಿದ್ದು, ಸಾರ್ವಜನಿಕರನ್ನು ಓಡಿ ಹೋಗಿರುವ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಕಾಡುಕೊತ್ತನಹಳ್ಳಿ ಗ್ರಾಮದ ಚಂದ್ರಶೇಖರ್ ಎಂದು ಹೇಳಿದ್ದು, ಸದರಿಯವರನ್ನು ಪಂಚಾರಾಗಿ ಇರುವಂತೆ ಕೋರಲಾಗಿ ಒಪ್ಪಿರುವುದಿಲ್ಲ. ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಸಮಯಾವಕಾಶ ಇಲ್ಲ ಕಾರಣ ನಿಯಮದಡಿಯಲ್ಲಿ ತಾನೇ ಶೋಧನಾ ವಾರೆಂಟ್ ನ್ನು ತಯಾರಿಸಿ, ಸದರಿ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ 90 ಎಂಎಲ್ ನ ಅವುಗಳಲ್ಲಿ 90 ಮಿಲಿಯ ಹೈವರ್ಾಡ್ಸ್ ವಿಸ್ಕಿ 168 ಟೆಟ್ರಾ ಪ್ಯಾಕ್ ಗಳು, ಒಟ್ಟು 15.120 ಲೀಟರ್ ಮಧ್ಯ ದೊರೆತಿರುತ್ತದೆ. ಆ ಬಗ್ಗೆ ಪರಿಶೀಲಿಸಲಾಗಿ ಸದರಿಯು ಲೈಸೆನ್ಸ್ ಹೊಂದಿಲ್ಲದ ಮಧ್ಯವಾಗಿದ್ದು, ನಂತರ ಅವರನ್ನು

ವಶಕ್ಕೆ ಪಡೆದು ದೊರೆತ ಮದ್ಯದ ಪೈಕಿ 90 ಎಂಎಲ್ ನ 30 ಟೆಟ್ರಾ ಪ್ಯಾಕ್ ಗಳನ್ನು ರಾಸಾಯನಿಕ ಪರೀಕ್ಷಾ ವರದಿಗಾಗಿ ಬಿಳಿ ಬಟ್ಟೆಯಲ್ಲಿ ಹಾಕಿ ದಾರದಿಂದ ಒಲೆದು ಅರಗಿನಿಂದ ಸೀಲ್ ಮಾಡಿರುತ್ತೇವೆ ಮತ್ತು ಮಾದರಿ ಸೀಲ್ ನಕಲನ್ನು ತಯಾರಿಸಿರುತ್ತೇವೆ. ಸದರಿ ವೇಳೆಯಲ್ಲಿ ಸ್ಥಳ ಮತ್ತು ಅಮಾನತ್ತು ಮಹಜರ್ ನ್ನು ತಯಾರಿಸಿರುತ್ತೇನೆ. ಸದರಿ ಮಹಜರ್ ನ್ನು ಮದ್ಯಾಹ್ನ 12.25 ರಿಂದ 1.20 ರವರೆಗೆ ತಯಾರಿಸಿರುತ್ತೇವೆ. ಆರೋಪಿಯನ್ನು ಮುದ್ದೆ ಮಾಲು ಸಮೇತ ದಸ್ತಗಿರಿ ಮಾಡಿ, ಠಾಣೆಗೆ ಕರೆದುಕೊಂಡು ಬಂದು ಸ್ವದೂರು ದಾಖಲಿಸಿ, ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಸಮುಚಿತ ಶೋಧನಾ ವಾರೆಂಟ್ ನ್ನು ನಿಪಿ-1 ಎಂದು, ಸಾಕ್ಷಿಯ ಸಹಿ ನಿಪಿ-1 ಎ ಎಂದು, ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿ ನಿಪಿ-2 ಎ ಎಂದು ಗುರುತಿಸಲಾಯಿತು. ಮಾದರಿ ಸೀಲ್ ನ್ನು ನಿಪಿ-3 ಎಂದು, ಸಾಕ್ಷಿಯ ನಿಪಿ-3 ಎ ಎಂದು, ಸ್ವದೂರನ್ನು ನಿಪಿ-4 ಎಂದು, ಸಾಕ್ಷಿಯ ಸಹಿ ನಿಪಿ-4 ಎ ಎಂದು, ಪ್ರ.ವ.ವರದಿ ನಿಪಿ-5 ಎಂದು, ಸಾಕ್ಷಿಯ ಸಹಿ ನಿಪಿ-5 ಎ ಎಂದು ಗುರುತಿಸಲಾಯಿತು.

ಸದರಿ ಅಮಾನತ್ತುಪಡಿಸಿದ ಮದ್ಯವನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆಯಿರುವ ಆರೋಪಿಯೇ ಸದರಿ ದಿನ ವಶಕ್ಕೆ ಪಡೆದ ಆರೋಪಿಯಾಗಿರುತ್ತಾರೆ. ಈಗ ನ್ಯಾಯಾಲಯದ ಮುಂದೆಯಿರುವ ಮಧ್ಯವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಎಂಓ-1 ರಿಂದ 30 ಎಂದು ಗುರುತಿಸಲಾಯಿತು. ನಂತರ ಸದರಿ ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ–7 ರವರಿಗೆ ಉಳಿಕೆ ಮಧ್ಯ ಮತ್ತು ಕಡತವನ್ನು ಹಸ್ತಾಂತರಿಸಿರುತ್ತೇನೆ.

ಪಾಟೀ ಸವಾಲುಃ ಆರೋಪಿಯ ಪರ ಶ್ರೀ ಹೆಚ್ ಆರ್ ವಕೀಲರಿಂದಃ-

ನಮ್ಮ ಕಚೇರಿಯನ್ನು ಬೆಳಗ್ಗೆ 11.00 ಗಂಟೆಗೆ ಬಿಟ್ಟಿದ್ದೇವು. ಕಚೇರಿಯಿಂದ ಗೆಜ್ಜಲಗೆರೆ, ಮದ್ದೂರು ಟೌನ್ ಮೂಲಕ ಗಸ್ತು ಮಾಡುತ್ತಿದ್ದೇವು. ಮಳವಳ್ಳಿ- ಮದ್ದೂರು ರಸ್ತೆ ಮತ್ತು ಎಳನೀರು ಮಾರುಕಟ್ಟೆಯ ನಡುವೆ 1 ರಿಂದ 1 ವರೆ ಕಿಮೀ ಅಂತರವಿದೆ ಎಂದರೆ ಸರಿ. ಸದರಿ ಮಾರುಕಟ್ಟೆಯ ಮುಂದಿನ ರಸ್ತೆಯ ಹಳ್ಳಿಗಳಿಗೆ ಹೋಗುವ ರಸ್ತೆ ಎಂದರೆ ಸರಿ. ವಿವಾದಿತ ಸ್ಥಳದಲ್ಲಿ ಸುಮಾರು 3-4 ಜನರು ಇದ್ದರು, ಸದರಿಯವರ ಹೆಸರು ಗೊತ್ತಿಲ್ಲ.

ಎಳನೀರು ಮಾರುಕಟ್ಟೆಯು ಚಾಲ್ತಿಯಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ಸದರಿ ಎಳನೀರು ಮಾರುಕಟ್ಟೆಗೆ ನೂರಾರು ಜನ ಇರುತ್ತಾರೆಂದರೆ ನನಗೆ ಗೊತ್ತಿಲ್ಲ. ಹಳ್ಳಿಗಾಡು ರಸ್ತೆಯಾಗಿದ್ದರಿಂದ ಸಾರ್ವಜನಿಕರು ಸಾಕಷ್ಟು ಜನ ಓಡಾಡುತ್ತಿರುತ್ತಾರೆಂದರೆ ನಾನು ಇದ್ದಾಗ ಇರಲಿಲ್ಲ ಎನ್ನುತ್ತಾರೆ. ಆರೋಪಿಯು ಅಕ್ರಮ ಮಧ್ಯ ಸಾಗಾಣಿಕೆ ಮಾಡುತ್ತಿದ್ದರು ಎಂದು ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಆರೋಪಿಯು ನಮ್ಮನ್ನು 100 ಮೀಟರ್ ದೂರದಲ್ಲಿ ನೋಡಿದಾಗ ಓಡಿ ಹೊಗೀರುತ್ತಾರೆ. ಸದರಿಯವರು ಮಳವಳ್ಳಿ ಕಡೆ ರಸ್ತೆಗೆ ಓಡಿ ಹೋಗಿರುತತಾರೆ. ಸದರಿ ವಿವಾದಿತ ಸ್ಥಳದಿಂದ ಮಳವಳ್ಳಿ ಕಡೆಗೆ ರಸ್ತೆ ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ಮೂಮಾ ನ್ನು ಮೋ ಸೈಕಲ್ ನಲ್ಲಿ ಇರಿಸಿಕೊಂಡು ಹೋಗುತ್ತಿದ್ದರು ಎಂದು ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಆರೋಪಿಯಿಂದ ಮೂಮಾ ನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮಹಜರ್ ನ್ನು ಠಾಣೆಯಲ್ಲಿ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ. ಸೃಷ್ಟಿತ ಮಹಜರ್ ಗೆ ಚಾಸಾ-2, 3 ರವರ ಸಹಿ ಪಡೆದುಕೊಂಡಿದ್ದೀರಿ ಎಂದರೆ ಸರಿಯಲ್ಲ. ನಾನು ಆ ದಿನ ಯಾವುದೇ ಗಸ್ತು ಮಾಡಿಲ್ಲದಿದ್ದರೂ ಮತ್ತು ಆರೋಪಿಯಿಂದ ಯಾವುದೇ ಮಧ್ಯವನ್ನು ವಶಪಡಿಸಿಕೊಂಡಿಲ್ಲದಿದ್ದರೂ ಠಾಣಾ ಅಂಕಿಅಂಶಗಳಿಗಾಗಿ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಆರೋಪಿಯು ನನ್ನನ್ನು ನೋಡಿ ಓಡಿ ಹೋದರು ಎಂದು ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಆರೋಪಿಯು ಯಾವುದೇ ಅಪರಾಧ ಮಾಡದೇ ಇದ್ದರೂ ಸುಳ್ಳು ದೂರು ದಾಖಲಿಸಿ ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಚಾಸಾ-2, 3 ರವರು ನಮ್ಮ ಸಿಬ್ಬಂದಿಗಳು ಎಂದರೆ ಸರಿ.

**<u>ಮರುವಿಚಾರಣೆ ಇಲ್ಲ</u>**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ